ದಿನಾಂಕಃ **24.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ **1** ಮತ್ತು **2** ನೇ ಪ್ರತಿವಾದಿಗಳ ಪರ ಶ್ರೀ. ವಿ .ಎಮ್ .ವಕೀಲರಿಂದಃ

ನಿಮ್ಮ ತಾಯಿಯವರು ಯಾವ ವರ್ಷದಲ್ಲಿ ದಾವಾ ಸ್ವತ್ತನ್ನು ಖರೀದಿಸಿದ್ದರು ಎಂದರೆ 1981 ನೇ ಇಸವಿಯಲ್ಲಿ. ನೀವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದೀರಿ ಎಂದರೆ ಸರಿ. ನಾನು ಸಿನಿಯರ ಅಸಿಸ್ಟಂಟ ಆಗಿ ಕೆಲಸ ಮಾಡುತ್ತಿದ್ದೇನೆ. ಖರೀದಿ ಮಾಡುವ ಕಾಲಕ್ಕೆ ನಿಪಿ-1 ರಲ್ಲಿ ಶೆಡ್ಯೂಲ ಸ್ವತ್ತು ಒಟ್ಟು ಎಷ್ಟು ಚದುರಡಿಗಳು ಇತ್ತು ಎಂದು ನಮಾದಿಸಿಲ್ಲ ಎಂದರೆ ಸಾಕ್ಷಿ ನಿಪಿ-1 ನ್ನು ಪರಿಶೀಲಿಸಿ ಗುಂಟೆ ಲೆಕ್ಕದಲ್ಲಿ ಹಾಕಿದ್ದೇವೆ. ದಾವಾ ಸ್ವತ್ತು ಖರೀದಿ ಮಾಡುವ ಕಾಲಕ್ಕೆ ಉತ್ತರ-ದಕ್ಷಿಣ, ಪೂರ್ವ- ಪಶ್ಚಿಮ ಎಷ್ಟು ವಿಸ್ತೀರ್ಣ ಇತ್ತು ಎಂದರೆ ಉತ್ತರ-ದಕ್ಷಿಣ-60 ಅಡಿಗಳು, ಪೂರ್ವ- ಪಶ್ಚಿಮ-44 ಅಡಿಗಳು. ಆ ರೀತಿ ನಿಪಿ-1 ರಲ್ಲಿ ನಮೂದಾಗಿಲ್ಲ ಎಂದರೆ ಸಾಕ್ಷಿ ನಿಪಿ-1 ನ್ನು ಪರಿಶೀಲಿಸಿ ಸರಿ ಎಂದು ಹೇಳಿರುತ್ತಾರೆ. ನೀವು ಈ ಹಿಂದೆ ಇದೆ ಪ್ರತಿವಾದಿಗಳ ಮೇಲೆ ಶಾಶ್ವತ ತಡೆಯಾಜ್ಞೆ ಕೋರಿ ಅಸಲು ದಾವಾ ಸಂಖ್ಯೆ1214/2013 ದಾವೆ ಸಲ್ಲಿಸಿದ್ದೀರಿ ಎಂದರೆ ಸರಿ. ಈ ಕೇಸಿನಲ್ಲಿ ಅದರ ತಿರ್ಪು ಮತ್ತು ಡಿಕ್ರಿ ಪ್ರತಿ ನಿಪಿ-6 ಎಂದು ಗುರುತಿಸಲಾಗಿದೆ ಎಂದರೆ ಸರಿ. ಇದೆ ದಾವಾ ಸ್ವತ್ತಿನ ಮೇಲೆ ಸಲ್ಲಿಸಿದ್ದ ದಾವೆ ಎಂದರೆ ಸರಿ. ಆ ಕೇಸಿನ ಶೆಡ್ಯೂಲನಲ್ಲಿ ನೀವು

ಪೂರ್ವ- ಪಶ್ಚಿಮ-44 ಅಡಿಗಳು, ಉತ್ತರ-ದಕ್ಷಿಣ-60 ಅಡಿಗಳು ಎಂದು ತೋರಿಸಿದ್ದೀರಿ ಎಂದರೆ ಸರಿ. ಈ ಪ್ರಸ್ತುತ ದಾವೆಯಲ್ಲಿ ಆ ರೀತಿ ಪೂರ್ವ-ಪಶ್ಚಿಮ ಎಷ್ಟು ವಿಸ್ತೀರ್ಣ ಎಂದು ಮತ್ತು ಉತ್ತರ-ದಕ್ಷಿಣ ಎಷ್ಟು ವಿಸ್ತೀರ್ಣ ಎಂದು ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು Square feet ಲೆಕ್ಕ ದಲ್ಲಿ ಹಾಕಿದ್ದೇನೆ. ನೀವು ಒಟ್ಟು 2505 Square feet ಎಂದು ತೋರಿಸಿದ್ದೀರಿ ಎಂದರೆ ಹೌದು. ನೀವು ಈ ಕೇಸಿನ ಶೆಡ್ಯೂಲನಲ್ಲಿ ಸೈಟ ನಂಬರ 10 ಮತ್ತು 11 ಸೇರಿ 2505 Square feet ಎಂದು ಹೇಳಿದ್ದೀರಿ ಎಂದರೆ ಹೌದು. ಅಸಲು ದಾವಾ ಸಂಖ್ಯೆ:1214/2013 ದಾವೆಯಲ್ಲಿ ನಿಮ್ಮ ಸೈಟ ನಂಬರ 10 ಮತ್ತು 11 ಎಂದು ನಮೂದಾಗಿಲ್ಲ ಎಂದರೆ ಸೈಟ ನಂಬರ 10 ಎಂದು ಆಗಿದೆ ಸೈಟ ನಂಬರ 11 ಎಂದು ಆಗಿಲ್ಲ. ಈಗ ನಿಮ್ಮ ಪ್ರಕಾರ ಈಗ ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ ಎಷ್ಟು ಇದೆ ಅಂದರೆ 2640 ಚದುರಡಿಗಳು ಎಂದರೆ ಸರಿ. ಆದರೆ ನೀವು ತೋರಿಸಿರುವ ದಾವಾ ಶೆಡ್ಯೂಲನಲ್ಲಿ 2505 ಚದುರಡಿಗಳು ಎಂದು ನಮೂದಾಗಿದೆ ಎಂದರೆ ಸರಿ. ನೀವು 2.3 ಗುಂಟೆ ಜಮೀನಿಗೆ 2505 Square feet ಎಂದು ಇದೆ ಎಂದು ತೋರಿಸಿದ್ದೀರಾ ಎಂದರೆ ಸರಿ.

ದಾವಾ ಸ್ವತ್ತಿನ ಯಾವ ದಿಕ್ಕಿನಲ್ಲಿ ಕಟ್ಟಡ ಕಟ್ಟಿದ್ದೀರಿ ಎಂದರೆ ದಕ್ಷಿಣ ದಿಕ್ಕಿನಲ್ಲಿ. ಎಷ್ಟು ವಿಸ್ತಿರ್ಣಕ್ಕೆ ಕಟ್ಟಿದ್ದೀರಾ ಎಂದರೆ ನಮ್ಮ ತಂದೆಯವರು ಕಟ್ಟಿದ್ದು ನನಗೆ ಗೊತ್ತಿಲ್ಲ. ಯಾವ ವರ್ಷದಲ್ಲಿ ಕಟ್ಟಿದ್ದು ಎಂದರೆ ನನಗೆ

ಗೊತ್ತಿಲ್ಲ. ಕಟ್ಟಡ ಕಟ್ಟಿದ್ದು ಬಿಟ್ಟು ಉಳಿಕೆ ಜಮೀನು ಪೂರ್ವ- ಪಶ್ಚಿಮ, ಉತ್ತರ-ದಕ್ಷಿಣ ಎಷ್ಟು ಇದೆ ಎಂದರೆ ಮನೆ ಕಟ್ಟಿರುವುದೆ ಎಂದು ಗೊತ್ತಿಲ್ಲ ಎಂದರೆ ಉಳಿಕೆ ಜಾಗವನ್ನು ನಾನು ಅಳತೆ ಮಾಡಿಲ್ಲ. ಬಾಡಿಗೆ ಯಾರಿಗೆ ಕೊಟ್ಟಿದ್ದೀರಿ ಎಂದರೆ ಹಳೆ ಕಾಲದಲ್ಲಿ ನಮ್ಮ ತಂದೆಯವರು ಯಾರಿಗೆ ಕೊಟ್ಟಿದ್ದರೋ ನನಗೆ ಗೊತ್ತಿಲ್ಲ. ಯಾವ ವರ್ಷದಿಂದ ಬಾಡಿಗೆ ಕೊಟ್ಟಿದ್ದರು ಎಂದು ನಿಮಗೆ ಗೊತ್ತಿದೆ ಎಂದರೆ 2001 ರಿಂದ ಗೊತ್ತಿದೆ. ಪ್ರಸ್ತುತ ಈಗ ಯಾರಿದ್ದಾರೆ ಎಂದರೆ ಇವರ ಬಾಡಿಗೆದಾರರು ಬಾತ್ ರೂಮನ್ನು ಒಡೆದು ಹಾಕಿದ್ದರು ಹಾಗಾಗಿ ಯಾರು ಅಲ್ಲಿ ಇಲ್ಲ. ಯಾವ ವರ್ಷದಲ್ಲಿ ನೀವು ದಾವೆ ಸಲ್ಲಿಸಿದ್ದೀರಿ ಎಂದರೆ 2021 ರಲ್ಲಿ. ಆ ಕಾಲಕ್ಕೆ ಯಾರು ಬಾಡಿಗೆ ಇದ್ದರು ಎಂದರೆ ಕರಾರಿನ ಪತ್ರ ಸಲ್ಲಿಸಿದ್ದೇವೆ. ಬಾಡಿಗೆಗೆ ಯಾರು ಕೊಟ್ಟಿದ್ದರು ಎಂದರೆ ನಮ್ಮ ತಾಯಿಯವರು ಕೊಟ್ಟಿದ್ದರು. ಯಾವ ವರ್ಷದಲ್ಲಿ ಯಾರು ಯಾರಿಗೆ ಬಾಡಿಗೆ ಕೊಟ್ಟಿದ್ದರು ಎಂದು ನಿಮ್ಮ ತಾಯಿಯವರಿಗೆ ಚೆನ್ನಾಗಿ ಗೊತ್ತಿದೆ ಅವರು ಹೇಳುತ್ತಾರೆ ಅವರಿಗೆ ವಯಸ್ಸಾಗಿದೆ ಮತ್ತು ಇವರು ಹೇಳುವುದು ಅವರಿಗೆ ಕೇಳುವುದಿಲ್ಲ. ನಿಮಗೆ ದಾವಾ ಸ್ವತ್ತಿನ ಆಗು ಹೋಗುಗಳ ಬಗ್ಗೆ ವೈಯಕ್ತಿಕವಾಗಿ ವಿಚಾರ ಗೊತ್ತಿಲ್ಲ ಎಂದರೆ 2001 ರಿಂದ ವೈಯಕ್ತಿಕವಾಗಿ ದಾವಾ ಸ್ವತ್ತಿನ ವಿಚಾರ ಗೊತ್ತಿದೆ. ದಾವಾ ಸ್ವತ್ತಿನಲ್ಲಿ ಹೇಳಿರುವ ಸೈಟ ನಂಬರ 11 ಎಂದು ತೋರಿಸಲು ನಿಮ್ಮ ಬಳಿ ಏನು ದಾಖಲೆ ಇದೆ ಎಂದರೆ ತೆರಿಗೆ ಕಟ್ಟಿದ್ದ

ರಶೀದಿಗಳು ಇವೆ. ಎಲ್ಲಾ ತೆರಿಗೆ ಕಟ್ಟಿದ್ದ ರಶೀದಿಗಳು ಸೈಟ ನಂಬರ 10 ಎಂದು ನಮೂದಾಗಿದೆ ಎಂದರೆ ಸರಿ. ನಿಮಗೆ ಬಿ ಬಿ ಎಂ ಪಿಯವರು ನೀಡಿರುವ ಹಿಂಬರಹ ನಿಪಿ-9 ರಲ್ಲಿ ಸೈಟ ನಂಬರ-10 ಎಂದು ನಮೂದಾಗಿದೆ ಎಂದರೆ ಸರಿ. ನೀವು ಹಾಜರು ಪಡಿಸಿರುವ ಯಾವುದೇ ದಾಖಲೆಗಳಲ್ಲಿ ಸೈಟ ನಂಬರ 11 ನಮೂದಾಗಿಲ್ಲ ಎಂದರೆ ಸರಿ. ನಿಮ್ಮ ದಾವಾ ಸ್ವತ್ತಿನಲ್ಲಿ ಸೈಟ ನಂಬರ 11 ಅಸ್ತಿತ್ವದಲ್ಲೆ ಇಲ್ಲ ನೀವು ಸುಳ್ಳು ಕ್ಲೇಮನ್ನು ಕೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಒಟ್ಟು ನಿಮ್ಮ ದಾವಾ ಸ್ವತ್ತಿನ ವಿಸ್ತೀರ್ಣ 60X40 ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 60X44. ನಿಪಿ-9 ರ ಪ್ರಕಾರ ನಿಮ್ಮ ಸ್ವತ್ತಿನ ಒಟ್ಟು ವಿಸ್ತೀರ್ಣ 2400 ಚದುರಡಿಗಳು ಎಂದರೆ ಸರಿ. ಈ ಕೇಸಿನಲ್ಲಿ ನಿಪಿ-7 ನೀವಾಗಲಿ ಅಥವಾ ನಿಮ್ಮ ಕಡೆಯಿಂದ ಹಾಕಿದ್ದ ದಾಖಲೆ ಅಲ್ಲ ಎಂದರೆ ಹಳೆ ಕೇಸಿನ endorsement ಇದೆ ಆದ್ದರಿಂದ ಹಾಕಿದ್ದೆ. ನಿಪಿ-7 ರಲ್ಲಿ ಹಳೆ ಕೇಸಿನ ನಂಬರಾಗಿಲಿ, ಸೀಲ್ ಆಗಲಿ ಇಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,**
**ಬೆಂಗಳೂರು.**